ಹಿಂಗೆ ಆಗುತ್ತದೆ, ಆಗಿದೆ ಎಂದು ಹೇಳುವೆ?' ಕಪ್ಪು ಮೂಗಿನವನು ಅಂದ ಚಕಿತನಾಗಿ.

'ಇಷ್ಟು ದಿನಗಳ ಗೆಳೆತನಕ್ಕೆ ಅಷ್ಟು ಅರ್ಥ ಆಗಲ್ವಾ ದೋಸ್ತ. ಅಲ್ಲದೆ ಮುಂದಿನ ಊಹೆಯ ಕುರುಹು ನಿನ್ನ ಕಥೆಯಲ್ಲಿಯೇ ಅಡಗಿದೆಯಲ್ಲ!'

ಆಷಾಢದ ಮೊದಲ ಶುಕ್ರವಾರ. ಉಗಾದಿ ಮಾರಿಗೆ ಒಂದು ಟಗರನ್ನು ಬಲಿಕೊಟ್ಟು, ತನ್ನ ಹಟ್ಟಿಯವರನ್ನೆಲ್ಲ ತನ್ನ ಮನೆಗೆ ಊಟಕ್ಕೆ ಆಮಂತ್ರಿಸುವನು. ಕಥಾನಾಯಕನನ್ನು ಹೊರತು ಪಡಿಸಿ, ಕಥಾನಾಯಕನ ಕುಟುಂಬದ ಎಲ್ಲರೂ ಬರುವರು. ಕಥಾನಾಯಕ ಮತ್ತು ಕಥಾನಾಯಕಿ ಆಗಿಂದಾಗ್ಗೆ ಗುಟ್ಟಾಗಿ ಸೇರುವುದು ಮುಂದುವರೆದಿರುತ್ತದೆ. ಹಾಗಾಗಿ, ಮಾರಿ ಹಬ್ಬದ ಊಟಕ್ಕೆ ಅವನು ಬಂದಿರುವುದಿಲ್ಲ. ಅವನು ಕಥಾನಾಯಕಿಯನ್ನು ಸಂಧಿಸಲು ಗುಲಾಬಿ ತೋಟಕ್ಕೆ ಹೋಗುವನು. ಇದನ್ನು ವ್ಯವಸ್ಥಿತವಾಗಿ, ಗುಟ್ಟಾಗಿ ಕಥಾನಾಯಕಿಯ ಕಡೆಯವರು ಮಾಡುವರು. ಕಥಾನಾಯಕನ ಅಪ್ಪನಿಗೆ ಉಗಾದಿ ನೆಂಟ ಆಗಬೇಕು. ಹೆಂಗೆ ಅಂದರೆ ಅವನ ಚಿಕ್ಕಪ್ಪನ ಮಗಳನ್ನು ಅವನ ತಮ್ಮನ ಮಗನಿಗೆ ಮದುವೆ ಮಾಡಿಕೊಂಡಿದ್ದಾರೆ. ಆದರೆ ಆ ನೆಂಟಸ್ಥಿಕೆಯಲ್ಲಿ ಅಂತಹ ಆಪ್ತತೆಯೇನು ಇಲ್ಲ. ಕಾರಣ ಉಗಾದಿ ಮದುವೆ ಆಗಬೇಕಾಗಿದ್ದ ಹೆಣ್ಣನ್ನು ಅವನು ಹಾರಿಸಿಕೊಂಡು ಹೋಗಿ ಮದುವೆ ಆಗಿದ್ದನು. ಆ ಸೇಡು ಅವನಲ್ಲಿ ಇನ್ನು ಇರುತ್ತದೆ. ಆದರೆ ಅದನ್ನು ಹೊರಗಡೆ ತೋರಿಸಿಕೊಂಡಿರುವುದಿಲ್ಲ. ಇದು ಕಥಾನಾಯಕಿಯ ಕಡೆಯವರಿಗೆ ಗೊತ್ತಿರುತ್ತದೆ. ಉಗಾದಿಗೆ ಆಮಿಷವನ್ನೊಡ್ಡಿ, ಕಥಾನಾಯಕನ ಕುಟುಂಬದವರು ತಾವು ಊಟಮಾಡಿ ಕಥಾನಾಯಕನಿಗೆ ಒಂದು ಬಟ್ಟಲಲ್ಲಿ ಮಾಂಸದ ಸಾರನ್ನು ಹೊಯ್ಯುವರು. ಅದರಲ್ಲಿ ಉಗಾದಿ ವಿಷವನ್ನು ಸೇರಿಸಿರುವನು.

'ನಿನ್ನ ಊಹೆಯ ಕಥೆ ತುಂಬಾ ನಾಟಕೀಯ ಆತು ಅಂತ ಅನಿಸುತ್ತೆ. ಮತ್ತು ಕಥಾನಾಯಕಿಯನ್ನು ತೋಟದ ಹತ್ತಿರ ಕಳುಹಿಸುವುದು ಇದೆಲ್ಲ ಉದ್ದೇಶ ಪೂರ್ವಕ ಅಂತ ಕಾಣುತ್ತೆ. ಇದೆಲ್ಲ ಚೀಪಾದ ಕಥಾ ತಂತ್ರ' ಅಂದ ಅವನು.

'ಸರಿ, ನಿನ್ನ ಕಥೆ ಹೇಗಿದೆ ಹೇಳು ಕೇಳುವೆ. ಕಥೆಗಳ ಬಗ್ಗೆ ಜಗಳ, ತಕರಾರು ಯಾಕೆ? ವಾಸ್ತವದಲ್ಲೇ ಅನೇಕ ಸಮಸ್ಯೆಗಳು ಇದ್ದಾವೆ, ಅವೇ ಇನ್ನೂ ಬಗೆಹರಿದಿಲ್ಲ, ಗಡಿ ವಿವಾದದ ತರ ಇವೆ' ಎಂದ ಅವನ ಸ್ನೇಹಿತ.

ಕಪ್ಪು ಮೂಗಿನವನು ತನ್ನ ಕಥೆಯನ್ನು ಹೇಳಿದ: ಕಥಾನಾಯಕನ ಕುಟುಂಬದವರು ಪ್ರತಿ ವರ್ಷ ಆಷಾಢದ ಅಮಾವಾಸ್ಯೆಯ ದಿನ ಮಾರಿಗೆ ಹೋತವನ್ನು ಬಲಿಕೊಡುವರು. ಇದು ಅವರ ಕುಟುಂಬದವರು ತಲೆತಲಾಂತರಗಳಿಂದ ಮಾಡಿಕೊಂಡು ಬಂದಿರುವ ಪದ್ಧತಿ. ಹಟ್ಟಿಯಲ್ಲಿ ನಡೆದ ಯಾವುದೇ ಮಾಂಸದ ಖಾದ್ಯದ ಸಾಮೂಹಿಕ ಭೋಜನದಲ್ಲಿ ಎಲ್ಲರಿಗೂ ಸಮವಾಗಿ ಬಾಡನ್ನು ಬಡಿಸುವುದರಲ್ಲಿ ಉಗಾದಿಯೆನ್ನುವವನು ಹೆಸರುವಾಸಿಯಾಗಿರುತ್ತಾನೆ. ಇಂತಹ ಸಂದರ್ಭದಲ್ಲಿ ಅನುಭವ ಇಲ್ಲದವರನ್ನು ಊಟ ಬಡಿಸಲು ಬಿಟ್ಟರೆ ಕೆಲವರಿಗೆ ಜಾಸ್ತಿ, ಕೆಲವರಿಗೆ ಕಡಿಮೆ ಬಡಿಸಿ, ಪಂಕ್ತಿಭೇದ ಮಾಡಿ ಜಗಳಕ್ಕೋ ಮನಸ್ತಾಪಕ್ಕೋ ಕಾರಣವಾಗಿ ಅದೊಂದು ದೊಡ್ಡ ರಾದ್ಧಾಂತಕ್ಕೆ ಎಡೆಮಾಡಿಕೊಡುವುದು. ಆ ಸಮಯವನ್ನು ಕಥಾನಾಯಕಿಯ ಜಾತಿಯವರು ತಮ್ಮ ಉದ್ದೇಶ ಸಾಧನೆಗಾಗಿ ಉಪಯೋಗಿಸಿಕೊಳ್ಳುವರು. ಕಥಾನಾಯಕನ ತಂದೆಯು ಮದುವೆಯಾಗಿದ್ದ ಹೆಣ್ಣನ್ನು ಅದೇ ಊರಿನ ಉಗಾದಿಯೆನ್ನುವ ಕಥಾನಾಯಕನ ತಂದೆಯ ವಾರಿಗೆಯ ಮತ್ತು ಸಂಬಂಧಿಕನೊಬ್ಬ ಇಷ್ಟ ಪಟ್ಟಿರುತ್ತಾನೆ. ಆದರೆ ಅವನಿಗೆ ಆ ಹೆಣ್ಣನ್ನು ಒಲಿಸಿಕೊಂಡು, ಮದುವೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದಕ್ಕೆ ಉಗಾದಿ ಒಳಗೇ ಕುದ್ದು ಹೋಗಿರುತ್ತಾನೆ. ಆದರೆ ಅದನ್ನು ತೋರ್ಪಡಿಸಿಕೊಂಡಿರುವುದಿಲ್ಲ. ಆದರೆ ಉಗಾದಿಗೆ ಆದ ನಿರಾಸೆಯು ಹೇಗೋ ಕಥಾನಾಯಕಿಯ ಕಡೆಯವರಿಗೆ ಗೊತ್ತಿರುತ್ತದೆ. ಉಗಾದಿಗೆ ಮಾರಿ ಹಬ್ಬದ ರಾತ್ರಿ ಬಾಡಿನ ಊಟದಲ್ಲಿ ಮದ್ದನ್ನು ಸೇರಿಸಿ ಕಥಾನಾಯಕನನ್ನು ಮುಗಿಸಲು ಏನೇನೋ ಆಮಿಷ ಒಡ್ಡುತ್ತಾರೆ. ಮುಳ್ಳಿನಿಂದ ಮುಳ್ಳನ್ನು ತೆಗೆಯುವ ಅವರ ಉದ್ದೇಶ ಹೀಗೆ ಈಡೇರುತ್ತದೆ.

'ನಿನ್ನದಿನ್ನೇನು? ನಾಟಕೀಯವಲ್ಲವಾ? ಹೋಗಲಿ ಬಿಡು ನನ್ನ ಮೂಗನ್ನು ನಿನ್ನ ಕಥೆಯಲ್ಲಿ ಯಾಕೆ ತೂರಿಸೋಣ, ನನ್ನ ಮೂಗು ಚೆನ್ನಾಗಿದೆ ಅಂತ ಸಿಕ್ಕ ಸಿಕ್ಕಲ್ಲಿ ತೂರಿಸಿ ಹಾಳುಮಾಡಿಕೊಳ್ಳುವುದು ಬೇಡ ಎಂದ ವ್ಯಂಗ್ಯದಿಂದ ಅವನ ಕಡೆ ತಿರುಗಿ.